# ಪ್ರಥಮ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ –2022–23
## (ಕಲಿಕಾ ಫಲ ಆಧಾರಿತ)
## 8ನೇ ತರಗತಿ – ಕನ್ನಡ

**ಗರಿಷ್ಠ ಅಂಕ : 30** **ಅವಧಿ: 1 ಗಂಟೆ 30 ನಿಮಿಷ**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.**

**1. ವ, ಟ, ಬ, ಅ, ಚ, ಔ, ಶ, ಯ, ಋ, ಠ – ಇವುಗಳಲ್ಲಿರುವ ಸ್ವರಾಕ್ಷರಗಳು ;** **1*4=4**

(ಎ) ಅ, ಔ, ಋ (ಬಿ) ವ, ಟ, ಬ, ಚ, ಠ

(ಸಿ) ಯ, ಶ (ಡಿ) ಯ, ಶ, ವ, ಟ, ಬ, ಚ, ಠ

**2. ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ ;**

(ಎ) ಅರ್ಧವಿರಾಮ ಚಿಹ್ನೆ (ಬಿ) ವಾಕ್ಯವೇಷ್ಟನ ಚಿಹ್ನೆ

(ಸಿ) ಅಲ್ಪವಿರಾಮ ಚಿಹ್ನೆ (ಡಿ) ಉದ್ಧರಣ ಚಿಹ್ನೆ

**3. ಕರ – ಈ ಪದದ ನಾನಾರ್ಥಕ ಪದಗಳು ;**

(ಎ) ಕರಿ – ಕೈ (ಬಿ) ಕೈ – ಮೊಸಳೆ

(ಸಿ) ಕೈ – ಕಂದಾಯ (ಡಿ) ಕಾಲು – ಕೈ

**4. ಈ ಕೆಳಗಿನವುಗಳಲ್ಲಿ ಸರಿಯಾದ ಅಕರಾದಿ ರೂಪ ;**

(ಎ) ಚಪ, ಕೇಶವ, ಈಶ, ಕೇಶರಾಶಿ, ಥಾಳ, ಋಷಿ (ಬಿ) ಕೇಶವ, ಕೇಶರಾಶಿ, ಚಪ, ಥಾಳ, ಈಶ, ಋಷಿ

(ಸಿ) ಈಶ, ಋಷಿ, ಕೇಶರಾಶಿ, ಕೇಶವ, ಚಪ, ಥಾಳ, (ಡಿ) ಈಶ, ಋಷಿ, ಕೇಶವ, ಕೇಶರಾಶಿ, ಚಪ, ಥಾಳ

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **1*2=2**

5. ಹೊಟ್ಟೆಗೆ ಹಾಕು : ಕ್ಷಮಿಸು : : ಕೈಕೊಡು : ______________

6. ಅಕ್ಷಿ : ಕಣ್ಣು : : ಉದರ : __________

**III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ** **1*5=5**

7. ಈರುಳ್ಳಿ ಮತ್ತು ಮೂಲಂಗಿಯ ಬಗ್ಗೆ ಇರುವ ಒಗಟುಗಳನ್ನು ಬರೆಯಿರಿ.
8. ಕಾನನ, ಕೋಗಿಲೆ, ಮಲ್ಲಿಗೆ, ಭ್ರಮರ – ಈ ಪದಗಳನ್ನು ಬಳಸಿಕೊಂಡು ಸ್ವಂತ ವಾಕ್ಯ ರಚಿಸಿರಿ.
9. ಖಾರ ಮತ್ತು ಸಿಹಿ ರುಚಿ ಹೊಂದಿರುವ ಯಾವುದಾದರೂ ಎರಡೆರಡು ಪದಾರ್ಥಗಳನ್ನು ಹೆಸರಿಸಿ.
10. ಸಾಹಿತ್ಯದ ಯಾವುದಾದರೂ ನಾಲ್ಕು ಪ್ರಕಾರಗಳನ್ನು ಹೆಸರಿಸಿ.
11. ಉಪ್ಪು, ಕುಡಿ, ತಾಯಿ, ಬಂಧು, ನೀರು, ತಿಂದ, ರುಚಿ– ಈ ಶಬ್ದಗಳನ್ನು ಬಳಸಿಕೊಂಡು ಎರಡು ಗಾದೆ ಮಾತುಗಳನ್ನು ರಚಿಸಿರಿ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ** **2*2=4**

12. ವೈದ್ಯರಿಂದ ಸೂಜಿ ಚುಚ್ಚಿಸಿಕೊಳ್ಳುವಾಗ ಆಗುವ ನಿಮ್ಮ ಅನುಭವಗಳನ್ನು ಬರೆಯಿರಿ.

**13. ಈ ಕೆಳಗಿನ ಗದ್ಯಭಾಗಕ್ಕೆ ಸೂಕ್ತವಾದ ಲೇಖನ ಚಿಹ್ನೆ ಬಳಸಿ ಬರೆಯಿರಿ.**

ಒಂದು ಸಲ ವಿಧಾನಸೌಧದ ಬಳಿ ಆಟೋಗಾಗಿ ಪರದಾಡುತ್ತಿದ್ದೆ ( ) ದೂರದಲ್ಲಿ ಹೋಗುತ್ತಿದ್ದ ಒಬ್ಬ ಆಟೋ ಚಾಲಕರು ನಾನಿದ್ದ ಕಡೆ ಬಂದರು ( ) ( ) ಏನ್‌ಸಾರ್ ( ) ನೀವು ನರಸಿಂಹಯ್ಯನವರಲ್ಲವೆ ( ) ಆಟೋ ಬೇಕೇ ( ) ಎಲ್ಲಿಗೆ ಹೋಗಬೇಕು ( ) ( ) ಎಂದು ತುಂಬಾ ವಿಶ್ವಾಸದಿಂದ ಕೇಳಿದರು( ) ನನಗಂತೂ ಪರಮಾಶ್ಚರ್ಯವಾಯಿತು

**V. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **3*1=3**

14. ಸತತ ಪ್ರಯತ್ನವೇ ಯಶಸ್ಸಿಗೆ ದಾರಿ

ಅಥವಾ

ದೇಶ ಸುತ್ತು ಕೋಶ ಓದು

**VI. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **4*1=4**

15. ಅರಳಿ ಮಲ್ಲಿಗೆ ______________________

______________________

______________________

______________________ಕುಕಿಲರಾಗ

**ಅಥವಾ**

ಬಳುಕಾಡಿ ______________________

______________________

______________________

ಲೋಕವಾರ್ತೆಯದೇನು ಅರುಹೆ.

**VII. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **4*1=4**

16. ಅನುಕರಣಾವ್ಯಯ, ಜೋಡುನುಡಿ, ದ್ವಿರುಕ್ತಿ, ರುಚಿಯ ಅನುಭವ, ಪ್ರಾಣಿ, ಪಕ್ಷಿ ಧ್ವನಿ, ವಾಹನಗಳ ಸದ್ದು, – ಇವುಗಳನ್ನೊಳಗೊಂಡಂತೆ ಪ್ರವಾಸದ ಒಂದು ಅನುಭವವನ್ನು ಬರೆಯಿರಿ.

**ಅಥವಾ**

ಗಾದೆ ಮಾತುಗಳು, ನುಡಿಗಟ್ಟುಗಳು ಮತ್ತು ಪ್ರಾಸ ಪದಗಳನ್ನು ಬಳಸಿಕೊಂಡು ಕಥೆಯೊಂದನ್ನು ರಚಿಸಿ.

**VIII. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **4=(2+2)**

ಮಾಲಾ ಶಾಲೆಗೆ ಹೋಗಬೇಕಾದರೆ ಕಾಲುದಾರಿ ಮೂಲಕ ಹೋಗಬೇಕಾಗಿತ್ತು. ಒಂದು ದಿನ ಶಾಲೆಗೆ ಕಾಲುದಾರಿಯಿಂದ ಹೋಗುತ್ತಿದ್ದಾಗ ಆಕೆಗೆ ನಾಯಿಯೊಂದು ನೋವಿನಿಂದ ಅರಚುವ ಶಬ್ದ ಕೇಳಿ ಅತ್ತ ಹೋಗಿ ನೋಡಿದಳು. ಪಾಪ! ನಾಯಿಯ ಕಾಲಿಗೆ ಮುಳ್ಳೊಂದು ಚುಚ್ಚಿ ರಕ್ತ ಹರಿಯುತ್ತಿತ್ತು. ಅದು ನೋವಿನಿಂದ ನಡೆಯಲಾಗದೆ ಕಣ್ಣೀರು ಸುರಿಸುತ್ತ ಬೊಗಳುತ್ತಿತ್ತು. ಮಾಲಾ ಧೈರ್ಯ ಮಾಡಿ ನಾಯಿಯ ಹತ್ತಿರ ಹೋಗಿ ಅದರ ಕಾಲಿಗೆ ಚುಚ್ಚಿದ ಮುಳ್ಳನ್ನು ತೆಗೆದು ಅಲ್ಲೇ ಇದ್ದ ನೋವು ನಿವಾರಕ ಮರದ ಸೊಪ್ಪನ್ನು ಅರೆದು ಅದರ ರಸವನ್ನು ಗಾಯಕ್ಕೆ ಹಚ್ಚಿದಳು. ಆಗ ನಾಯಿಗೆ ನೋವಿನಿಂದ ಮುಕ್ತಿ ಸಿಕ್ಕಿತು. ಅದು ತನಗೆ ಚಿಕಿತ್ಸೆ ನೀಡಿದ ಮಾಲಾಳನ್ನು ನಾಲಿಗೆಯಿಂದ ನೆಕ್ಕಿ ಕೃತಜ್ಞತೆಯನ್ನು ಸೂಚಿಸಿ ಮರೆಯಾಯಿತು. ಕೆಲವು ದಿನಗಳು ಕಳೆದವು, ಮಾಲಾ ಶಾಲೆಯಿಂದ ಮನೆಗೆ ಮರಳುವ ಸಮಯ. ಕಾಲುದಾರಿಯಲ್ಲಿ ಬರುತ್ತಿರುವಾಗ ಅವಳಿಗೆದುರಾಗಿ ಹುಚ್ಚುನಾಯಿಯೊಂದು ಬಂತು. ಅದು ಮಾಲಾಳನ್ನು ನೋಡಿ ವಿಚಿತ್ರವಾಗಿ ಬೊಗಳುತ್ತಾ ಮಾಲಾಳ ಹತ್ತಿರ ಬಂದಾಗ ಮಾಲಾ ಭಯದಿಂದ ಜೋರಾಗಿ ಕಿರುಚಿದಳು. ಈ ಧ್ವನಿ ಅಲ್ಲೇ ಸಮೀಪದಲ್ಲೇ ಇದ್ದ ಮಾಲಾಳಿಂದ ಚಿಕಿತ್ಸೆ 31 ಪಡೆದ ನಾಯಿಗೆ ಕೇಳಿಸಿತು. ಅದು ಕೋಪದಿಂದ ಬೊಗಳುತ್ತಾ ಬಂತು. ತನಗೆ ಸಹಾಯ ಮಾಡಿದವರನ್ನು ಹುಚ್ಚುನಾಯಿಯು ಭಯಗೊಳಿಸುತ್ತಿರುವುದನ್ನು ಕಂಡು ಕೋಪದಿಂದ ಆ ಹುಚ್ಚುನಾಯಿಯ ಮೇಲೆ ಹಾರಿ ಕಚ್ಚಲು ಶುರು ಮಾಡಿತು. ಇದರಿಂದ ಭಯಗೊಂಡ ಹುಚ್ಚುನಾಯಿಯು ಓಡಿ ಹೋಯಿತು. ತನ್ನನ್ನು ರಕ್ಷಿಸಿದ ನಾಯಿಗೆ ಮಾಲಾ ಕೃತಜ್ಞತೆಯನ್ನು ಹೇಳಿ ಮನೆಯ ಕಡೆಗೆ ಹೊರಟಳು. ನಾಯಿಯು ಅವಳನ್ನು ಹಿಂಬಾಲಿಸಿತು.

**ಪ್ರಶ್ನೆಗಳು :**

17. ಅ) ನಾಯಿಯು ಮಾಲಾಳಿಗೆ ಏಕೆ ಕೃತಜ್ಞತೆಯನ್ನು ಸಲ್ಲಿಸಿತು?

ಆ) ಮಾಲಾಳು ನಾಯಿಗೆ ಏಕೆ ಕೃತಜ್ಞತೆಯನ್ನು ಸಲ್ಲಿಸಿದಳು?